INDIAN JOURNAL OF HISTORY AND ARCHAEOLOGY
ISSN (e):2582-225X www.ijha.in
Vol-7, Issue -5, September-October, 2025
Page No,59-70
Peer -Reviewed, Refereed Journal

# ಭಾರತೀಯ ಸಮಾಜ ಮೇಲೆ ಬೌದ್ಧಧಮ್ಮದ ಪ್ರಭಾವ ಮತ್ತು ಪರಿಣಾಮ ಕುರಿತ ವಿಶ್ಲೇಷಣೆ

**ಡಾ.ಕಾಳಸ್ವಾಮಿ.ಹೆಚ್.ಎನ್.**[1]

**ಧ**ಮ್ಮವು ಮಾನವನ ನಂಬಿಕೆಯೊಂದಿಗೆ ಅತೀವವಾಗಿ ಸಂಬಂಧ ಪ್ರತಿ ಹಂತದಲ್ಲಿಯೂ ಹೊಂದಿರುತ್ತದೆ. ಇದು ಅಲೌಕಿಕ ಶಕ್ತಿಗಳಲ್ಲಿ ಅಥವಾ ಅತಿಮಾನವೀಯ ಶಕ್ತಿಗಳಲ್ಲಿ ಹೆಚ್ಚಿನ ನಂಬಿಕೆಯನ್ನು ಇಡುವಂತೆಯೇ ಮಾಡುತ್ತದೆ. ಆದ್ದರಿಂದಲೇ ಧಮ್ಮವು ಕೆಲವು ಕ್ರಿಯೆಗಳನ್ನು ನೀತಿವಂತ ಪವಿತ್ರವೆಂದು ಪರಿಗಣಿಸಿ ಅವುಗಳನ್ನು ಪ್ರೋತ್ಸಾಹಿಸುತ್ತದೆ. ಆದರೆ, ಇತರ ಕ್ರಿಯೆಗಳನ್ನು ಧಮ್ಮ ವಿರೋಧಿ ಮತ್ತು ಅಪವಿತ್ರವೆಂದು ಪರಿಗಣಿಸಿ ಅವುಗಳನ್ನು ಖಂಡಿಸುತ್ತದೆ. ಧಾರ್ಮಿಕ ಕಾನೂನುಗಳನ್ನು ಅನುಸರಿಸುವುದು ಆದರ್ಶನೀಯ ಮಾರ್ಗವಾಗಿದ್ದು, ಅವುಗಳ ವಿರುದ್ಧ ನಡೆಯುವುದು ಧಮ್ಮ ವಿರೋಧಿ ಎಂದು ನಂಬಲಾಗುತ್ತದೆ. ಮಾನವನ ನಡವಳಿಕೆಯ ಉದಾತ್ತ ಸದ್ಗುಣ ಶೀಲದ ಕ್ರಿಯೆಗಳ ಪ್ರತಿಫಲವಾಗಿಯೇ ಉತ್ತಮ ಫಲಿತಾಂಶಗಳನ್ನು ನೀಡುತ್ತದೆ. ಆದರೂ ಕೂಡ ಅಪವಿತ್ರ ಕ್ರಿಯೆಗಳು ವಿಪತ್ತಿಗೆ ಕಾರಣವಾಗುತ್ತವೆ ಎಂಬ ನಂಬಿಕೆ ಸಹಜವಾಗಿಯೇ ಮಾನವ ನಿರ್ಮಿತ ಸಮಾನದಲ್ಲಿ ಮೂಡಿಬರುತ್ತದೆ. ಮನುಷ್ಯನಿಗೆ ಜೈವಿಕ, ಆರ್ಥಿಕ ಮತ್ತು ಸಾಮಾಜಿಕ ಅಗತ್ಯಗಳ ಜೊತೆಗೆ ಧಾರ್ಮಿಕ ಅಗತ್ಯಗಳೂ ಮುಖ್ಯವಾಗಿದೆ. ಆದರೆ, ಧರ್ಮವು ಇತ್ತೀಚಿನದಲ್ಲ; ಇದು ಕಾಲಾತೀತವಾಗಿ ಪ್ರಾಚೀನ ಮತ್ತು ಆಧುನಿಕ ಹೀಗೆ ಬಗೆಯ ಎಲ್ಲಾ ಸಮಾಜಗಳಲ್ಲಿ ಕಂಡುಬರುತ್ತದೆ. ಇದು ಸಾಮಾಜಿಕ ನಿಯಂತ್ರಣದ ಶಕ್ತಿಯೂ, ಮಾನವನ ನಡವಳಿಕೆಯ ಮಾರ್ಗದರ್ಶಿಯಾಗಿದೆ. ಧಮ್ಮವು ಆರ್ಥಿಕ ಚಟುವಟಿಕೆಗಳು, ರಾಜಕೀಯ ಚಳುವಳಿಗಳು, ಆಸ್ತಿ ವ್ಯವಹಾರಗಳು, ಶೈಕ್ಷಣಿಕ ಕಾರ್ಯಗಳು, ವೈಜ್ಞಾನಿಕ ಆವಿಷ್ಕಾರಗಳು ಮತ್ತು ಕಲಾತ್ಮಕ ಬೆಳವಣಿಗೆಗಳ ಮೇಲೆ ಪ್ರಭಾವ ಬೀರಿದೆ. ಅದರ ಜೊತೆಗೆ, ಧಮ್ಮವು ನೈತಿಕತೆಯೊಂದಿಗೆ ನಿಕಟ ಸಂಬಂಧ ಹೊಂದಿದ್ದು, ವ್ಯಕ್ತಿಯ ನಡವಳಿಕೆಗಳಿಗೆ ಸ್ಪಷ್ಟ ನಿಯಮಗಳನ್ನು ಒದಗಿಸುತ್ತದೆ.

ಭಾರತವು ವಿಶ್ವ ಸಮುದಾಯದಲ್ಲಿ ವಿಶೇಷ ಸ್ಥಾನವನ್ನು ಹೊಂದಿದೆ. ಇದು ಪ್ರಪಂಚದ ಪ್ರಮುಖ ಧಾರ್ಮಿಕ ಸಿದ್ಧಾಂತಗಳಾದ ಬೌದ್ಧಧಮ್ಮ, ಹಿಂದೂ ಧರ್ಮ, ಜೈನ ಧರ್ಮ, ಕ್ರಿಶ್ಚಿಯನ್ ಧರ್ಮ, ಯಹೂದಿ ಧರ್ಮ, ಇಸ್ಲಾಂ ಮತ್ತು ಝೋರಾಷ್ಟ್ರೀಯನ್ ಧರ್ಮಗಳ ಅನುಯಾಯಿಗಳ ದೇಶವಾಗಿದೆ. ಇವುಗಳೆಲ್ಲವೂ ವಿವಿಧ ಕಾಲಘಟ್ಟಗಳಲ್ಲಿ ಭಾರತೀಯ ಸಮಾಜದ ಮೇಲೆ ವಿಭಿನ್ನ ರೀತಿಯ ಪ್ರಭಾವ

---

[1]. **ಸಂಶೋಧನಾ ಸಹಾಯಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು.**

ಬೀರಿವೆ. ಆದಾಗ್ಯೂ, ಭಾರತೀಯ ಸಮಾಜದ ಜೀವನದ ವಿವಿಧ ಕ್ಷೇತ್ರಗಳಲ್ಲಿ ಬೌದ್ಧಧಮ್ಮವು ತನ್ನದೇ ಪ್ರಭಾವ ಮತ್ತು ಪರಿಣಾಮಕ್ಕೆ ಕಾರಣವಾಗಿರುತ್ತದೆ.

ಐತಿಹಾಸಿಕ ದೃಷ್ಟಿಯಿಂದ ಬೌದ್ಧಧಮ್ಮದ ಉಗಮ ಮತ್ತು ವಿಕಾಸವೂ ಜೈನಧರ್ಮದ ಸ್ಥಾಪನೆಯ ಅನಂತರ ನಡೆದದ್ದೆಂದು ತಿಳಿದುಬರುತ್ತದೆ. ಮಹಾವೀರನು ಗುರು ಬುದ್ಧರ ಸಮಕಾಲೀನನಾಗಿದ್ದನು ಎಂಬ ವಿಷಯವು ಇದನ್ನು ದೃಢಪಡಿಸುತ್ತದೆ. ಬೌದ್ಧಧಮ್ಮವು ಜಗತ್ತಿನ ಪ್ರಮುಖ ಧರ್ಮಗಳಲ್ಲಿ ಒಂದಾಗಿ ಪರಿಗಣಿಸಲಾಗಿದೆ. ಇದು ಕ್ರಿ.ಪೂ. 6ನೆಯ ಶತಮಾನದಲ್ಲಿ ಭಾರತದಲ್ಲಿ ಹುಟ್ಟಿಕೊಂಡಿತು. ಬ್ರಾಹ್ಮಣರ ಶ್ರೇಷ್ಠತೆ ಮತ್ತು ಜಾತಿ ಅಸಮಾನತೆಗೆ ಪ್ರತಿಸ್ಪರ್ಧಿಯಾಗಿ ಬೌದ್ಧಧಮ್ಮವೂ ಹೊರಹೊಮ್ಮಿತು. 'ನಿಬ್ಬಾಣ'ವನ್ನು ಪಡೆಯಲು ಬಯಸುವ ವ್ಯಕ್ತಿಗಳಿಗೆ ಜಾತಿ ಅಥವಾ ವರ್ಣ ಅಡ್ಡಿಯಾಗಬಾರದು ಎಂಬ ಸಿದ್ಧಾಂತವನ್ನು ಬೌದ್ಧಧಮ್ಮವು ತನ್ನದೇ ಆದಂತಹ ರೀತಿಯಲ್ಲಿ ಘೋಷಿಸಿರುತ್ತದೆ. ಬೌದ್ಧಧಮ್ಮದಲ್ಲಿ ಎಲ್ಲಾ ಭಿಕ್ಷುಗಳು ಸಮಾನರು; ಅವರು ಸರಳ, ಸ್ಪಷ್ಟ ತತ್ವಶಾಸ್ತ್ರವನ್ನು ಕಡ್ಡಾಯವಾಗಿ ಪಾಲಿಸುತ್ತಾರೆ. ಇದರಿಂದ ಅನೇಕ ಹಿಂದೂಗಳು ಬೌದ್ಧಧಮ್ಮವನ್ನು ಸಹ ಸ್ವೀಕರಿಸಿದರು. ಬೌದ್ಧಧಮ್ಮವು ಕೇವಲ ಭಾರತದ ಗಡಿಯೊಳಗೆ ಮಾತ್ರವಲ್ಲದೇ, ದೇಶದ ಹೊರಗೂ ಕೂಡ ತನ್ನ ಪ್ರಭಾವ ಮತ್ತು ಪರಿಣಾಮವನ್ನು ಹರಡಿತು. ಬೌದ್ಧಧಮ್ಮವು ಸಂಘ ಮತ್ತು ಅದರ ಸಂಘಟನೆಯ ಮೂಲ ಪರಿಕಲ್ಪನೆಯನ್ನು ಮೊಟ್ಟಮೊದಲ ಬಾರಿಗೆ ಸಮಾಜದಲ್ಲಿ ಪರಿಚಯಿಸಿತು. ಪ್ರತಿಯೊಬ್ಬ ಮಾನವನು ತನ್ನ ಜೀವಿತದ ಕಾಲಸಂದರ್ಭದಲ್ಲಿ ಸಂಘದ ಮೂಲಕ ಸಂಘಟಿತ ನೀತಿಗಳನ್ನು ರೂಪಿಸುವುದು. ಇದರಿಂದಲೇ ಹಿಂದೂ ಚಿಂತಕರ ಮೇಲೆ ಈ ಬೌದ್ಧಧಮ್ಮವೂ ತನ್ನ ಪ್ರಭಾವವನ್ನು ಅತೀವಕ್ರಮದಲ್ಲಿಯೇ ಬೀರಿತು ಮತ್ತು ಅವರು ಸಹ ಸಂಘ ಮತ್ತು ಆ ಬಗೆಯಲ್ಲಿನ ಸಂಘಟನೆಗಳನ್ನು ಸ್ಥಾಪಿಸಲು ಪ್ರಾರಂಭಿಸಿದರು. ಸಮಕಾಲೀನ ಭಾರತದಲ್ಲಿ ನಾವು ವಿವಿಧ ಸಂಘಟನೆಗಳ ಅಧಿಕ ಪ್ರಮಾಣವನ್ನು ಕಾಣಬಹುದು. ಬೌದ್ಧಧಮ್ಮವು ಯಾವಾಗಲೂ ಬಹಳ ಸರಳ ಮತ್ತು ಮೂಲಭೂತ ಧಮ್ಮವಾಗಿದೆ. ಹಿಂದೂ ಧರ್ಮದಂತಹ ಸಂಕೀರ್ಣ ಆಚರಣೆಗಳು ಇಲ್ಲದ ಕಾರಣ, ಭಾರತೀಯ ಸಮಾಜವು ಈ ಸರಳ ಧಮ್ಮವನ್ನು ಸುಲಭವಾಗಿ ಅಳವಡಿಸಿಕೊಂಡಿತು ಮತ್ತು ಅದನ್ನು ತಮ್ಮ ಜೀವನ ಶೈಲಿಯಂತೆ ಅನುಸರಿಸಿತು.

**ಬೌದ್ಧಧಮ್ಮದ ಪ್ರಸಾರದಲ್ಲಿ ಗುರು ಬುದ್ಧರ ಪಾತ್ರ**

ಬೌದ್ಧಧಮ್ಮವನ್ನು ಜನಪ್ರಿಯಗೊಳಿಸಲು ಗುರು ಬುದ್ಧರ ವ್ಯಕ್ತಿತ್ವ ಮತ್ತು ಶಕ್ತಿಶಾಲಿ ಪಾತ್ರವೂ ಅತ್ಯಂತ ಪ್ರಮುಖ ಅಂಶವಾಗಿತ್ತು. ಅವರ ವಸ್ತುಗಳ ಬಗೆಗಿನ ತರ್ಕಬದ್ಧ ಮತ್ತು ವಿವೇಕಪೂರ್ಣ ವರ್ತನೆ ಬುದ್ಧಿಜೀವಿಗಳ ಮನಸ್ಸನ್ನು ಆಕರ್ಷಿಸಿತು. ಅವರ ನೈತಿಕತೆ, ಸರಳ ಜೀವನ ಮತ್ತು ಉದಾತ್ತ ವ್ಯಕ್ತಿತ್ವ ಸಾಮಾನ್ಯ ಜನರ ಹೃದಯ ಮತ್ತು ಕಲ್ಪನೆಗೆ ಸ್ಪಂದಿಸಿತು. ಬೌದ್ಧಧಮ್ಮದ ಪ್ರಚಾರಕರು ತಮ್ಮ ಭಕ್ತಿ, ತ್ಯಾಗ ಮತ್ತು ಬದ್ಧತೆಯಿಂದ ಧಮ್ಮದ ವೇಗವರ್ಧಿತ ಬೆಳವಣಿಗೆಗೆ ಕಾರಣರಾದರು. ಅವರು ಬೌದ್ಧಧಮ್ಮದ

ಸಂದೇಶವನ್ನು ದಕ್ಷಿಣ, ಪೂರ್ವ ಮತ್ತು ಮಧ್ಯ ಏಷ್ಯಾದ ಇತರ ಭಾಗಗಳಿಗೆ ಕೊಂಡೊಯ್ದರು. ಗುರು ಬುದ್ಧರು ತನ್ನ ಧರ್ಮೋಪದೇಶಗಳನ್ನು ಸಾಮಾನ್ಯ ಜನರ ಭಾಷೆಯಾಗಿದ್ದ "ಪಾಲಿ"ಯಲ್ಲಿ ನೀಡಿದರು. ಇದರಿಂದ ಸಂಸ್ಕೃತವನ್ನು ತಿಳಿಯದ ಅದೇಷ್ಟೋ ಜನರೂ ಧಮ್ಮವನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಯಿತು. ಬೌದ್ಧ ಸಾಹಿತ್ಯವು ಜನರ ಭಾಷೆಯಲ್ಲಿ ಬರೆಯಲಾಗಿತ್ತು ಮತ್ತು ಧರ್ಮೋಪದೇಶಗಳು ಸ್ಥಳೀಯ ಜನರಿಗೆ ಲಭ್ಯವಾಗುತ್ತಲೇ ಇರಲಾಯಿತು. ಬೌದ್ಧ ಸಮ್ಮೇಳನಗಳು ವಿಳಂಬ ವಾದ, ವಿಭಿನ್ನ ಅಭಿಪ್ರಾಯಗಳನ್ನು ಪರಿಹರಿಸುವ ಮತ್ತು ಏಕತೆಯನ್ನು ಬಲಪಡಿಸುವ ಕೇಂದ್ರವಾಗಿದ್ದವು. ಇದರಿಂದ ಧಮ್ಮದ ಸಂಕೀರ್ಣ ವಿಚಾರಗಳನ್ನು ಸರಳವಾಗಿ ಭಿಕ್ಷುಗಳು ಮತ್ತು ಶ್ರೋತೃಗಳಿಗೆ ತಲುಪಿಸಬಹುದಾಯಿತು. ಆಡಳಿತಗಾರರ ಪ್ರೋತ್ಸಾಹವೂ ಕೂಡ ಬೌದ್ಧಧಮ್ಮದ ಬೆಳವಣಿಗೆಗೆ ಮಹತ್ವಪೂರ್ಣ ಕಾರಣವಾಗಿತ್ತು. ಅದರಲ್ಲಿ ಪ್ರಧಾನವಾಗಿ; ಅಶೋಕ, ಕಾನಿಷ್ಕ, ಹರ್ಷವರ್ಧನರಂತಹ ರಾಜ–ಮಾಹಾರಾಜರು ತಮ್ಮ ಆಡಳಿತದಲ್ಲಿ ಧಮ್ಮವನ್ನು ಅಳವಡಿಸಿಕೊಂಡು ಅದನ್ನು ಪ್ರಖರವಾಗಿಯೇ ಬೆಂಬಲಿಸಿದರು. ಅವರು ಭಿಕ್ಷುಗಳಿಗೆ ಭೌತಿಕ ಸಂಪನ್ಮೂಲಗಳು, ರಕ್ಷಣಾ ವ್ಯವಸ್ಥೆ ಮತ್ತು ಸಹಾಯವನ್ನು ಒದಗಿಸಿದರು. ಸ್ತೂಪಗಳನ್ನು ನಿರ್ಮಿಸಿದರು ಮತ್ತು ವಿಹಾರ ಕಾರ್ಯಗಳನ್ನು ಹೆಚ್ಚು ಪ್ರೋತ್ಸಾಹಿಸಿದರು. ಈ ಎಲ್ಲಾ ಅಂಶಗಳು ಒಟ್ಟಾಗಿ ಬೌದ್ಧಧಮ್ಮವನ್ನು ಭಾರತೀಯ ಉಪಖಂಡದಲ್ಲಿಯೂ, ಅದರ ಹೊರಪ್ರದೇಶಗಳಲ್ಲಿಯೂ ಪ್ರಬಲ ಧಮ್ಮವಾಗಿ ರೂಪಿಸಲು ಸಹಾಯ ಮಾಡಿದವು.

**ಭಾರತೀಯ ಸಂಸ್ಕೃತಿಗೆ ಬೌದ್ಧಧಮ್ಮದ ಕೊಡುಗೆ ಮತ್ತು ಅದರ ಪ್ರಭಾವ**

ಬೌದ್ಧಧಮ್ಮವೂ ಭಾರತೀಯ ಸಂಸ್ಕೃತಿಗೆ ಅಪಾರವಾದ ಕೊಡುಗೆಯನ್ನು ನೀಡುವ ಮೂಲಕ ತನ್ನದೇ ಆದಂತಹ ಪ್ರಭಾವ ಮತ್ತು ಪರಿಣಾಮವನ್ನು ಬೀರಿರುತ್ತದೆ. ಅವುಗಳನ್ನು ಈ ಕೆಳಗಿನಂತೆ ಉಲ್ಲೇಖಿಸಲಾಗಿದೆ.

- **ರಾಜಕೀಯ ಕ್ಷೇತ್ರದಲ್ಲಿ;** ಬೌದ್ಧಧಮ್ಮವು ಅಹಿಂಸೆ ಮತ್ತು ಧಮ್ಮರಾಜ್ಯದ ತತ್ವಗಳನ್ನು ಒತ್ತಿಹೇಳಿತು. ಸಾಮ್ರಾಟ್ ಅಶೋಕನು ಬೌದ್ಧಧಮ್ಮವನ್ನು ತನ್ನ ರಾಜ್ಯಾಡಳಿತದಲ್ಲಿ ಅಳವಡಿಸಿಕೊಂಡು "ಧಮ್ಮ" ಆಧಾರಿತ ಆಡಳಿತವನ್ನು ನೀಡಿದನು. ಆಡಳಿತದಲ್ಲಿ ಪ್ರಜೆಗಳ ಕಲ್ಯಾಣ, ನೈತಿಕತೆ ಮತ್ತು ಅಹಿಂಸೆ ಪ್ರಮುಖ ಅಂಶಗಳಾಗಿದ್ದವು. ಇದರಿಂದ ಭಾರತೀಯ ರಾಜಕೀಯ ಜೀವನದಲ್ಲಿ ಜನಪರ ದೃಷ್ಟಿಕೋನ ಬಲವತ್ತಾಯಿತು.
- **ಸಾಮಾಜಿಕ ಕ್ಷೇತ್ರದಲ್ಲಿ;** ಬೌದ್ಧಧಮ್ಮವು ಸಮಾನತೆಯ ತತ್ವವನ್ನು ಹೆಚ್ಚು ಹರಡಿತು. ಜಾತಿ, ವರ್ಣ, ಕುಲಗಳ ಅಂತರವನ್ನು ತಿರಸ್ಕರಿಸಿತು. ಮಹಿಳೆಯರಿಗೆ ಧಮ್ಮ ಹಾಗೂ ಶಿಕ್ಷಣದಲ್ಲಿ ಪ್ರವೇಶ ಕಲ್ಪಿಸಿದ ಮೊದಲ ಧಾರ್ಮಿಕ ಪರಂಪರೆಗಳಲ್ಲಿ ಇದು ಪ್ರಮುಖವಾಗಿದೆ. ಶೋಷಿತರು, ಶೂದ್ರರು, ಅಸ್ಪೃಶ್ಯರು ಬೌದ್ಧಧಮ್ಮದಲ್ಲಿ ಸಮಾನತೆಯನ್ನು ಕಂಡು ಧರ್ಮಾಂತರಣ ಮಾಡಿಕೊಂಡರು.

- **ಧಾರ್ಮಿಕ ಕ್ಷೇತ್ರದಲ್ಲಿ;** ಬೌದ್ಧಧಮ್ಮವು ಬ್ರಾಹ್ಮಣ ಧರ್ಮದ ಕಠಿಣ ಯಜ್ಞ–ಹೋಮ, ಬಲಿ–ತ್ಯಾಗಗಳ ವಿರುದ್ಧ ಧ್ವನಿ ಎತ್ತಿತು. ಅಹಿಂಸಾ ತತ್ವವನ್ನು ಪ್ರಬಲವಾಗಿಯೇ ಪ್ರಚಾರ ಮಾಡಿತು. ಮೂರ್ತಿಪೂಜೆಯನ್ನು ಆರಂಭದಲ್ಲಿ ವಿರೋಧವಾಗಿದ್ದರೂ, ಮಹಾಯಾನ ಪಂಥದವರಿಂದ ಗುರು ಬುದ್ಧರ ಮೂರ್ತಿಗಳ ಆರಾಧನೆ ಪ್ರಸಾರವಾಯಿತು. ಇದರಿಂದ ಹಿಂದೂಧರ್ಮವು ಸಹ ವಿಗ್ರಹಾರಾಧನೆಯನ್ನು ಅಳವಡಿಸಿಕೊಂಡಿತು.
- **ಸಾಂಸ್ಕೃತಿಕ ಕ್ಷೇತ್ರದಲ್ಲಿ;** ಬೌದ್ಧಧಮ್ಮವು ಭಾರತದ ವಾಸ್ತುಶಿಲ್ಪ ಮತ್ತು ಶಿಲ್ಪಕಲೆಗೆ ಮಹತ್ತರ ಕೊಡುಗೆಯನ್ನು ನೀಡಿತು. ಸಾಂಚಿ, ಸಾರನಾಥ, ಬೋಧಗಯಾ, ಅಮರಾವತಿಯಂತಹ ಸ್ಥಳಗಳಲ್ಲಿ ನಿರ್ಮಿಸಿದ ಸ್ತೂಪಗಳು, ವಿಹಾರಗಳು ಮತ್ತು ಚೈತ್ಯ ಗುಹೆಗಳು ಭಾರತೀಯ ಕಲೆಗೊಂದು ಶಾಶ್ವತ ಗುರುತು. ಬೌದ್ಧ ಶಿಲ್ಪಗಳು ಮಾನವೀಯತೆ, ಸರಳತೆ ಮತ್ತು ಶಾಂತಿಯ ಸಂಕೇತಗಳಾಗಿವೆ. ಬೌದ್ಧ ಸಾಹಿತ್ಯವು (ತ್ರಿಪಿಟಕ, ಜಾತಕ ಕಥೆಗಳು) ಭಾರತೀಯ ಭಾಷೆಗಳ ಮತ್ತು ಸಾಹಿತ್ಯದ ವಿಕಾಸಕ್ಕೆ ಪ್ರೇರಕವಾಯಿತು.

ಬೌದ್ಧಧಮ್ಮವೂ ಹೀಗೆ, ಭಾರತದ ರಾಜಕೀಯ, ಸಾಮಾಜಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಜೀವನವನ್ನು ಆಳವಾಗಿ ಪ್ರಭಾವಿಸಿದೆ. ಇದು ಅಹಿಂಸಾ, ಸಮಾನತೆ, ಕರುಣೆ ಮತ್ತು ಜನಪರ ಆಡಳಿತದ ಆದರ್ಶಗಳನ್ನು ನೀಡಿದೆ. ಇದರಿಂದ ಭಾರತೀಯ ಸಮಾಜವು ಮಾನವೀಯತೆ ಮತ್ತು ನೈತಿಕತೆಯತ್ತ ಮುಖಮಾಡಿತು.

**ಭಾಷೆ, ಸಾಹಿತ್ಯ ಮತ್ತು ಶಿಕ್ಷಣಕ್ಕೆ ಬೌದ್ಧ ವಿದ್ವಾಂಸರು ನೀಡಿರುವ ಕೊಡುಗೆ**

ಬೌದ್ಧ ವಿದ್ವಾಂಸರು ತಮ್ಮ ತಮ್ಮ ಕಾಲಮಾನದಲ್ಲಿ ಭಾಷೆ, ಸಾಹಿತ್ಯ ಮತ್ತು ಶಿಕ್ಷಣಕ್ಕೆ ನೀಡಿರುವ ಕೊಡುಗೆಯೂ ಅಪಾರವಾಗಿದೆ. ಆ ಮೂಲಕ ಬೌದ್ಧಧಮ್ಮವೂ ತನ್ನದೇ ಆದಂತಹ ಪ್ರಭಾವ ಮತ್ತು ಪರಿಣಾಮವನ್ನು ಬೀರಲೂ ಸಹ ಪ್ರಧಾನ ಕಾರಣವಾಗಿದೆ. ಅವುಗಳನ್ನು ಈ ಕೆಳಗಿನಂತೆ ಸಾದರಪಡಿಸಲಾಗಿದೆ.

- **ಸಾಮಾನ್ಯ ಭಾಷೆಯ ಪ್ರಚಾರ** – ಬೌದ್ಧ ವಿದ್ವಾಂಸರು ಸಂಸ್ಕೃತದ ಬದಲು ಪಾಳಿ ಮತ್ತು ಪ್ರಾಕೃತ ಭಾಷೆಗಳಲ್ಲಿ ತಮ್ಮ ಬೋಧನೆಗಳನ್ನು ರಚಿಸಿದರು. ಅದರ ಕಾರಣ ಮತ್ತು ಪರಿಣಾಮವಾಗಿ ಸಾಮಾನ್ಯ ಜನರು ಸುಲಭವಾಗಿ ಬೌದ್ಧಧಮ್ಮವನ್ನು ಅರ್ಥಮಾಡಿಕೊಂಡು ಅನುಸರಿಸಿದರು. ಜನಪ್ರಿಯ ಭಾಷೆಯಲ್ಲಿ ಸಾಹಿತ್ಯ ರಚನೆಯ ಪ್ರೇರಣೆ ಬೌದ್ಧ ವಿದ್ವಾಂಸರ ಪ್ರಮುಖ ಕೊಡುಗೆಯಾಗಿದೆ.

- **ಸಾಹಿತ್ಯ ಮತ್ತು ಕಲೆಗೆ ನೀಡಿರುವ ಕೊಡುಗೆ** – ಬೌದ್ಧ ಸಾಹಿತ್ಯದ ತ್ರಿಪಿಟಕಗಳು – ವಿನಯ ಪಿಟಕ, ಸೂತ್ರ ಪಿಟಕ, ಅಭಿಧಮ್ಮ ಪಿಟಕ, ಹಿಂದೂ ಧರ್ಮದಲ್ಲಿ ವೇದಗಳಂತೆ ಪವಿತ್ರ ಸ್ಥಾನ ಪಡೆದವು. ಜಾತಕ ಕಥೆಗಳು ನೈತಿಕ ಬೋಧನೆಯೊಂದಿಗೆ ಕಾವ್ಯ ಮತ್ತು ಕಥನ ಪರಂಪರೆಯನ್ನು ಶ್ರೀಮಂತಗೊಳಿಸಿತು. ನಾಟಕ, ಕಾವ್ಯ, ಪ್ರಬಂಧದಂತಹ ಪ್ರಕಾರಗಳಲ್ಲಿ ಬೌದ್ಧರ ಪ್ರೇರಣೆ ಮಹತ್ವದ್ದಾಗಿತ್ತು. ಕಾಳಿದಾಸರಂತಹ ಕವಿಗಳಿಗೂ ಬೌದ್ಧ ಸಾಹಿತ್ಯವು ಪರೋಕ್ಷವಾಗಿ ಪ್ರಭಾವ ಬೀರಿದೆಯೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ.
- **ಶಿಕ್ಷಣ ಕ್ಷೇತ್ರದಲ್ಲಿ ಕೊಡುಗೆ** – ಬೌದ್ಧರು ಶಿಕ್ಷಣವನ್ನು ಸರ್ವಜನರಿಗೆ ಲಭ್ಯವಾಗುವಂತೆ ಮಾಡಿದರು. ಶೂದ್ರರು ಮತ್ತು ಮಹಿಳೆಯರಿಗೆ ಶಿಕ್ಷಣದ ಬಾಗಿಲುಗಳನ್ನು ತೆರೆದಿದ್ದು, ಬೌದ್ಧ ಪರಂಪರೆಯ ಪ್ರಮುಖ ಕ್ರಾಂತಿಕಾರಿ ಸಾಧನೆಯಾಗಿದೆ. ನಾಳಂದಾ, ತಕ್ಷಶಿಲಾ, ವಿಕ್ರಮಶೀಲ, ವಲ್ಲಭಿಯಂತಹ ವಿಶ್ವವಿದ್ಯಾನಿಲಯಗಳು ಬೌದ್ಧ ಪಂಡಿತರಿಂದ ಪ್ರಸಿದ್ಧಗೊಂಡವು. ಇವು ಕೇವಲ ಧಾರ್ಮಿಕ ಶಿಕ್ಷಣವಲ್ಲ, ವೈದ್ಯಶಾಸ್ತ್ರ ಗಣಿತ, ತಾರ್ಕಿಕ ಶಾಸ್ತ್ರ, ವ್ಯಾಕರಣ, ತತ್ವಶಾಸ್ತ್ರದಂತಹ ಹಲವು ಹತ್ತು ವಿಷಯಗಳನ್ನು ಬೋಧಿಸುತ್ತಿದ್ದವು.
- **ವಿದೇಶಗಳಿಗೆ ಭಾರತೀಯ ಸಂಸ್ಕೃತಿಯ ಪ್ರಸಾರ** – ಬೌದ್ಧ ಭಿಕ್ಷು ಸಂಘಗಳು ಶ್ರೀಲಂಕಾ, ಮ್ಯಾನ್ಮಾರ್, ಟಿಬೆಟ್, ಚೀನಾ, ಜಪಾನ್, ಕಾಂಬೋಡಿಯಾದಂತಹ ದೇಶಗಳಿಗೆ ತೆರಳಿ ಬೌದ್ಧಧಮ್ಮವನ್ನು ಹರಿಸಿದರು. ಅವರೊಂದಿಗೆ ಭಾರತೀಯ ಭಾಷೆ, ಲಿಪಿ, ಕಲೆ, ವಾಸ್ತುಶಿಲ್ಪ, ಸಂಸ್ಕೃತಿ ಮತ್ತು ನೈತಿಕ ಮೌಲ್ಯಗಳು ಸಹ ವಿದೇಶಗಳಿಗೆ ಹಬ್ಬಿದವು. ಬೌದ್ಧಧಮ್ಮದ ಮೂಲಕ ಭಾರತವು "ವಿಶ್ವಗುರು" ಸ್ಥಾನವನ್ನು ಪಡೆದಿತು. ಬೌದ್ಧ ವಿದ್ವಾಂಸರ ಕಾರ್ಯಚಟುವಟಿಕೆಗಳಿಂದ ಭಾರತೀಯ ಭಾಷಾ ಪರಂಪರೆ, ಸಾಹಿತ್ಯ, ಶಿಕ್ಷಣ ಮತ್ತು ವಿಶ್ವಸಂಸ್ಕೃತಿಯಲ್ಲಿ ಹೆಚ್ಚು ಶ್ರೀಮಂತಗೊಂಡವು. ಇದರಿಂದ ಬೌದ್ಧಧಮ್ಮವು ಕೇವಲ ಧಾರ್ಮಿಕ ಚಳವಳಿ ಅಲ್ಲದೆ, ಸಾಮಾಜಿಕ–ಸಾಂಸ್ಕೃತಿಕ ಕ್ರಾಂತಿಯಾಗಿಯೂ ರೂಪುಗೊಂಡಿತು.

**ಭಾರತೀಯ ಸಮಾಜದ ಮೇಲೆ ಬೌದ್ಧಧಮ್ಮದ ಪ್ರಭಾವ ಮತ್ತು ಪರಿಣಾಮ**

ಬೌದ್ಧಧಮ್ಮವೂ ಭಾರತೀಯ ಸಮಾಜದ ಮೇಲೆ ಪ್ರಭಾವ ಮತ್ತು ಪರಿಣಾಮವನ್ನು ಬೀರಿರುವುದನ್ನು ಈ ಕೆಳಗಿಂತಿರುವ ಅಂಶಗಳಿಂದ ದೃಢಪಡಿಸಲಾಗಿದೆ. ಅವುಗಳೆಂದರೆ;

- **ಸಾಮಾಜಿಕ–ಸಾಂಸ್ಕೃತಿಕ ಪ್ರಭಾವ** – ಬೌದ್ಧಧಮ್ಮವು ಜಾತಿ ಭೇದ, ಕುಲ ವ್ಯವಸ್ಥೆ ಮತ್ತು ಪುರೋಹಿತ ಪ್ರಧಾನ ಧಾರ್ಮಿಕ ಆಚರಣೆಗಳನ್ನು ತಿರಸ್ಕರಿಸಿತು. ಸಾಮಾನ್ಯ ಜನರಿಗೆ ಅರ್ಥವಾಗುವ ಧರ್ಮವನ್ನು ರೂಪಿಸುವ ಮೂಲಕ ಅದು ಜನಪ್ರಿಯತೆಯನ್ನು ಗಳಿಸಿತು.

ಮಹಿಳೆಯರಿಗೆ ಧರ್ಮ ಮತ್ತು ಶಿಕ್ಷಣ ಪ್ರವೇಶ ನೀಡಿದ ಮೊದಲ ಧಾರ್ಮಿಕ ಚಳವಳಿ ಬೌದ್ಧಧಮ್ಮ. ಇದು ದಾನ, ಶುದ್ಧತೆ, ಸ್ವಯಂ–ತ್ಯಾಗ, ಸತ್ಯತೆ ಮತ್ತು ಭಾವೋದ್ರೇಕಗಳ ನಿಯಂತ್ರಣದ ನೈತಿಕತೆಯ ಆಧಾರವಾಗಿ ಜನರಲ್ಲಿ ಒಳ್ಳೆಯ ಗುಣಗಳನ್ನು ಬೆಳೆಸಿತು.

- **ಧಾರ್ಮಿಕ ಪ್ರಭಾವ** – ಬೌದ್ಧಧಮ್ಮವು ಅಹಿಂಸೆ, ಕರುಣೆ, ಪ್ರೀತಿ, ಸಮಾನತೆಗಳಿಗೆ ಹೆಚ್ಚು ಒತ್ತು ನೀಡಿತು. ಹಿಂದಿನ ಉಪನಿಷತ್ತುಗಳಲ್ಲಿಯೂ ಈ ಮೌಲ್ಯಗಳು ಇದ್ದರೂ, ಜನಸಾಮಾನ್ಯರ ಮಟ್ಟದಲ್ಲಿ ನೈತಿಕತೆಯನ್ನು ಉತ್ತೇಜಿಸಿ, ಅದನ್ನು ಜೀವನದ ಭಾಗವನ್ನಾಗಿ ಮಾಡಿದ ಸಾಧನೆ ಬೌದ್ಧಧಮ್ಮದ್ದು. ಬೌದ್ಧಧಮ್ಮದಲ್ಲಿ ದೇವರ ಅಸ್ತಿತ್ವ ಅಥವಾ ಪೂಜೆಯಿಗಿಂತಲೂ ಮನುಷ್ಯನೇ ತನ್ನ ಜೀವನದ ಶಿಲ್ಪಿ ಎಂಬ ತತ್ವವೂ ಪ್ರಮುಖವಾಗಿದೆ. ಇದು ಅಧಿದೈವಿಕ ಕಲ್ಪನೆಗಳಿಗಿಂತ ಮಾನವೀಯ ಮೌಲ್ಯಗಳಿಗೆ ಒತ್ತು ನೀಡಿದ ಧಾರ್ಮಿಕ ಚಳವಳಿಯಾಗಿ ಪ್ರತ್ಯೇಕತೆಯನ್ನು ಸಾಧಿಸಿತು.
- **ರಾಜಕೀಯ ಪ್ರಭಾವ** – ಅಶೋಕನಂತಹ ಚಕ್ರವರ್ತಿಗಳು ಬೌದ್ಧಧಮ್ಮವನ್ನು ಅಳವಡಿಸಿಕೊಂಡು "ಧಮ್ಮರಾಜ್ಯ"ದ ಮಾದರಿಯನ್ನು ನಿರ್ಮಿಸಿದರು. ರಾಜಕಾರಣದಲ್ಲಿ ಪ್ರಜೆಗಳ ಹಿತ, ನ್ಯಾಯ, ನೈತಿಕತೆ ಮತ್ತು ಅಹಿಂಸಾ ತತ್ವಗಳಿಗೆ ಒತ್ತು ನೀಡಲಾಯಿತು. ಇದು ರಾಜಕೀಯ ಜೀವನದಲ್ಲಿ ಮಾನವೀಯತೆ ಮತ್ತು ಪ್ರಜೆಪರತೆಯನ್ನು ಉತ್ತೇಜಿಸಿತು.
- **ತತ್ವಶಾಸ್ತ್ರ ಮತ್ತು ನೈತಿಕತೆಯ ಪ್ರಭಾವ** – ಬೌದ್ಧಧಮ್ಮದ ಮಹತ್ವದ ಕೊಡುಗೆ ಎಂದರೆ; ಮನುಷ್ಯನ ಸ್ವಾವಲಂಬನೆಯ ತತ್ವ. "ಪ್ರತಿ ವ್ಯಕ್ತಿಯು ತನ್ನ ಕರ್ಮದ ಫಲದಿಂದಲೇ ತನ್ನ ಜೀವನವನ್ನು ರೂಪಿಸುತ್ತಾನೆ" ಎಂಬ ಕರ್ತೃತ್ವದ ತತ್ವವು ಭಾರತೀಯ ತತ್ವಶಾಸ್ತ್ರದಲ್ಲಿ ಹೊಸ ಬೆಳಕು ತಂದಿತು. ಇದರಿಂದ ಜನರಲ್ಲಿ ಸ್ವತಂತ್ರ ಚಿಂತನೆ, ನೈತಿಕ ಜವಾಬ್ದಾರಿ, ಆಧ್ಯಾತ್ಮಿಕ ಸ್ವಾತಂತ್ರ್ಯ ಬೆಳೆದವು.

ಒಟ್ಟಾರೆಯಾಗಿ; ಬೌದ್ಧಧಮ್ಮವು ಕೇವಲ ಧಾರ್ಮಿಕ ಚಳವಳಿ ಅಲ್ಲ; ಅದು ಸಾಮಾಜಿಕ, ಧಾರ್ಮಿಕ, ರಾಜಕೀಯ ಹಾಗೂ ನೈತಿಕ ಕ್ರಾಂತಿ. ಅದು ಜನಜೀವನವನ್ನು ಪುರೋಹಿತಾಧೀನ ಆಚರಣೆಗಳಿಂದ ಮುಕ್ತಗೊಳಿಸಿ, ಮಾನವೀಯ ಮೌಲ್ಯಗಳನ್ನು ಕೇಂದ್ರಬಿಂದುವನ್ನಾಗಿಸಿಕೊಂಡಿತು. ಇದರಿಂದ ಭಾರತೀಯ ಸಮಾಜವು ನೈತಿಕತೆ, ಸಮಾನತೆ, ಪ್ರೀತಿ ಮತ್ತು ಅಹಿಂಸೆಯ* ಆದರ್ಶಗಳತ್ತ ಹೆಜ್ಜೆ ಇಟ್ಟಿತು.

**ಭಾರತೀಯ ಸಮಾಜದಲ್ಲಿ ಬೌದ್ಧಧಮ್ಮದ ಕ್ರಾಂತಿಕಾರಿ ಪ್ರಭಾವ ಮತ್ತು ಪರಿಣಾಮ**

ಬೌದ್ಧಧಮ್ಮವು ಭಾರತೀಯ ಸಮಾಜದಲ್ಲಿ ತನ್ನದೇ ಆದಂತಹ ಕ್ರಾಂತಿಕಾರಿ ಪ್ರಭಾವ ಮತ್ತು ಪರಿಣಾಮವನ್ನು ಬೀರಿರುವುದನ್ನು ಗುರುತಿಸಬಹುದು. ಅವುಗಳೆಂದರೆ;

- **ಬ್ರಾಹ್ಮಣ ಧರ್ಮಕ್ಕೆ ಸವಾಲು** – ಬೌದ್ಧಧಮ್ಮವು ಬ್ರಾಹ್ಮಣ ಧರ್ಮವನ್ನು ತನ್ನ ಉನ್ನತ ಪೀಠದಿಂದ ಸಂಪೂರ್ಣ ಉರುಳಿಸಲು ಸಾಧ್ಯವಾಗದಿದ್ದರೂ, ಅದು ಅದರ ಆಧಿಪತ್ಯವನ್ನು ಪ್ರಶ್ನಿಸಿತು. ಜಾತಿ ವ್ಯವಸ್ಥೆ, ಪ್ರಾಣಿ ಬಲಿ, ಯಜ್ಞ, ಉಪವಾಸ, ತೀರ್ಥಯಾತ್ರೆ, ಹಿಂಸಾತ್ಮಕ ಆಚರಣೆಗಳು ಇವುಗಳನ್ನೆಲ್ಲಾ ತಿರಸ್ಕರಿಸಿ, ಬೌದ್ಧಧಮ್ಮವು ಹೊಸ ಧಾರ್ಮಿಕ–ಸಾಮಾಜಿಕ ಮೌಲ್ಯಗಳನ್ನು ಪರಿಚಯಿಸಿತು. ಇದರಿಂದ ಹಿಂದೂ ಧರ್ಮವು ಸಹ ತನ್ನ ಆಚರಣೆಗಳಲ್ಲಿ ಸರಳೀಕರಣ ಮತ್ತು ಸುಧಾರಣೆಗಳನ್ನು ತರುವಂತಾಯಿತು.
- **ಸಮಾನತೆಯ ಪ್ರಚಾರ** – ಬೌದ್ಧಧಮ್ಮವು ಜಾತಿ, ವರ್ಣ, ಲಿಂಗಭೇದಗಳ ವಿರುದ್ಧ ಧ್ವನಿ ಎತ್ತಿತು. ಪುರುಷ–ಮಹಿಳೆ, ಶ್ರೇಷ್ಠ–ಹೀನ ಎಂಬ ಅಂತರವಿಲ್ಲದೆ ಸಮಾನತೆ ಮತ್ತು ಮಾನವೀಯತೆಗೆ ಒತ್ತು ನೀಡಿತು. ಮಹಿಳೆಯರಿಗೆ ಧರ್ಮ ಪ್ರವೇಶ ಮತ್ತು ಶಿಕ್ಷಣದ ಹಕ್ಕು ದೊರೆತದ್ದು ಬೌದ್ಧ ಪರಂಪರೆಯ ಪ್ರಮುಖ ಕೊಡುಗೆ.
- **ತತ್ವಶಾಸ್ತ್ರದ ಪರಿವರ್ತನೆ** – ಬೌದ್ಧಧಮ್ಮವು ಮನುಷ್ಯನೇ ತನ್ನ ಕರ್ಮದ ಫಲಕ್ಕೆ ಕಾರಣ ಎಂಬ ತತ್ವವನ್ನು ಒತ್ತಿಹೇಳಿತು. ದೇವರು, ದೇವತೆಗಳು ಅಥವಾ ಗ್ರಹಗಳ ಚಲನೆಗಳು ಮನುಷ್ಯನ ಬದುಕನ್ನು ನಿರ್ಧರಿಸುತ್ತವೆ ಎಂಬ ನಂಬಿಕೆಯನ್ನು ತಿರಸ್ಕರಿಸಿತು. ಇದರಿಂದ ಜನರು ಆ ಲೌಕಿಕ ಉತ್ತರಗಳ ಹುಡುಕಾಟಕ್ಕಿಂತ, ಈ ಲೌಕಿಕ ಜೀವನದ ಸಮಸ್ಯೆಗಳ ಪರಿಹಾರವನ್ನು ಹುಡುಕಲು ಪ್ರೇರೇಪಿತರಾದರು. ಧರ್ಮವು ಅಧಿದೈವಿಕ ಕಲ್ಪನೆಗಳಿಗಿಂತ ಮಾನವ ಕೇಂದ್ರಿತ ಜೀವನದ ತತ್ವವಾಗಿ ರೂಪುಗೊಂಡಿತು.
- **ಅಹಿಂಸಾ ಮತ್ತು ವಿಶ್ವಮಾನವೀಯತೆ** – ಬೌದ್ಧಧಮ್ಮವು ಅಹಿಂಸೆಯನ್ನು ಮೂಲಮೌಲ್ಯವನ್ನಾಗಿ ಪರಿಗಣಿಸಿತು. ಎಲ್ಲಾ ಜೀವಿಗಳ ರಕ್ಷಣೆಗೆ, ದಯೆ, ಸಹಾನುಭೂತಿ ಮತ್ತು ಸಮಾನತೆಗೆ ಒತ್ತು ನೀಡಿತು. "ಸರ್ವ ಜನಹಿತಾಯ, ಸರ್ವ ಜನಸುಖಾಯ" ಎಂಬ ಆದರ್ಶದ ಮೂಲಕ ವಿಶ್ವಮಾನವೀಯತೆಯನ್ನು ಬೋಧಿಸಿತು.
- ವಿಶ್ವಧರ್ಮವಾಗಿ ಬೌದ್ಧಧಮ್ಮ – ಸಮಾನತೆ, ನ್ಯಾಯ, ಅಹಿಂಸಾ ಮತ್ತು ಸಹಾನುಭೂತಿಯ ತತ್ವಗಳಿಂದ ಬೌದ್ಧಧಮ್ಮವು ಜನಪ್ರಿಯ ಧರ್ಮವಾಗಿ ಬೆಳೆಯಿತು. ಇದರ ವಿಶ್ವಮಾನವೀಯ ಸಂದೇಶವೇ ಭಾರತದಿಂದ ಹೊರಗೆ ಚೀನಾ, ಟಿಬೆಟ್, ಜಪಾನ್, ಮಂಗೋಲಿಯಾ,

ಶ್ರೀಲಂಕಾದಂತಹ ದೇಶಗಳಿಗೆ ಹಬ್ಬುವಂತೆ ಮಾಡಿತು. ಈ ಅಂತರ ರಾಷ್ಟ್ರೀಯ ಪ್ರಸಾರವು ಬೌದ್ಧಧಮ್ಮವನ್ನು ಕೇವಲ ಭಾರತೀಯ ಧರ್ಮವಲ್ಲದೆ ವಿಶ್ವಧರ್ಮವನ್ನಾಗಿ ರೂಪಿಸಿತು.

ಒಟ್ಟಾರೆಯಾಗಿ; ಬೌದ್ಧಧಮ್ಮವು ಬ್ರಾಹ್ಮಣ ಧರ್ಮದಂತೆಯೇ ಆಧಿಪತ್ಯ ಸಾಧಿಸಲಿಲ್ಲವಾದರೂ, ಅದು ಭಾರತೀಯ ಸಮಾಜದಲ್ಲಿ ಸಾಂಸ್ಥಿಕ ಬದಲಾವಣೆಗಳನ್ನು ಅನಿವಾರ್ಯವಾಗಿ ಉಂಟುಮಾಡಿತು. ಜಾತಿ ತಾರತಮ್ಯದ ವಿರುದ್ಧ, ಲಿಂಗ ಸಮಾನತೆಯ ಪರವಾಗಿ, ಅಹಿಂಸಾ ಮತ್ತು ವಿಶ್ವಮಾನವೀಯತೆಗಾಗಿ ಹೋರಾಡಿದ ಬೌದ್ಧಧಮ್ಮವು ಭಾರತೀಯ ಸಮಾಜವನ್ನು ಆಳವಾಗಿ ಪ್ರಭಾವಿಸಿದೆ. ಇದರಿಂದಲೇ ಅದು ಗಡಿಗಳನ್ನು ಮೀರಿ ವಿಶ್ವಧರ್ಮವಾಗಿ ಅಸ್ತಿತ್ವ ಪಡೆಯಿತು.

**ಬೌದ್ಧ ಚಿಂತನೆಯ ಪ್ರಭಾವ ಮತ್ತು ಪರಿಣಾಮ**

ಬೌದ್ಧ ಚಿಂತನೆಯ ಪ್ರಭಾವ ಮತ್ತು ಪರಿಣಾಮವು ಕೇವಲ ಪ್ರಾಚೀನ ಭಾರತದ ಸಾಮಾಜಿಕ–ಧಾರ್ಮಿಕ ಜೀವನವನ್ನಷ್ಟೇ ಅಲ್ಲದೆ, ಆಧುನಿಕ ಭಾರತದ ರಾಜಕೀಯ, ಸಾಂಸ್ಕೃತಿಕ ಹಾಗೂ ಸಾಮಾಜಿಕ ಅಸ್ತಿತ್ವದ ಮೇಲೂ ಗಾಢವಾಗಿ ಬೀರಿದೆ. ಅವುಗಳನ್ನು ಈ ಕೆಳಗಿಂತೆ ಉಲ್ಲೇಖಿಸಲಾಗಿದೆ.

- **ವಿದೇಶಾಂಗ ನೀತಿಯಲ್ಲಿ ಪ್ರಭಾವ** – ಬೌದ್ಧಧಮ್ಮದ ಅಹಿಂಸಾ ಮತ್ತು ಶಾಂತಿ ತತ್ವಗಳು ಭಾರತದ ವಿದೇಶಾಂಗ ನೀತಿಯ ಮೇಲೆ ನೇರ ಪರಿಣಾಮ ಬೀರಿವೆ. ಶಾಂತಿ, ಪರಸ್ಪರ ಸಹಕಾರ ಮತ್ತು ಅಂತರರಾಷ್ಟ್ರೀಯ ಸಹಬಾಳ್ವೆ ಎಂಬ ಮೌಲ್ಯಗಳನ್ನು ನೆರೆಹೊರೆಯ ರಾಷ್ಟ್ರಗಳೊಂದಿಗೆ ಸಂಬಂಧಗಳನ್ನು ಬೆಳೆಸುವ ತತ್ವದ ಆಧಾರವಾಗಿಯೂ ಬಳಸಲಾಗಿದೆ.
- **ರಾಷ್ಟ್ರೀಯ ಏಕೀಕರಣ** – ಬೌದ್ಧಧಮ್ಮವು ವರ್ಣ, ಜಾತಿ, ಮತ, ಲಿಂಗ ಬೇಧಗಳ ಮೀರಿ ಎಲ್ಲರಿಗೂ ಸಮಾನ ಸ್ಥಾನ ನೀಡಿದ ಕಾರಣ, ಅದು ರಾಷ್ಟ್ರೀಯ ಏಕತೆಯನ್ನು ಬಲಪಡಿಸುವ ಶಕ್ತಿಯಾಗಿ ಪರಿಣಮಿಸಿದೆ.
- **ದುರ್ಬಲ ವರ್ಗಗಳ ಉನ್ನತಿ** – ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಇತರೆ ದಮನಿತ ವರ್ಗಗಳಿಗೆ ಬೌದ್ಧಧಮ್ಮವು ಸಮಾನ ಹಕ್ಕುಗಳು ಮತ್ತು ಗೌರವ ನೀಡಿತು. ಅಂಬೇಡ್ಕರ್ ಅವರ ಬೌದ್ಧಧಮ್ಮದ ಸ್ವೀಕಾರವು ಸಾಮಾಜಿಕ ನ್ಯಾಯ ತತ್ವಕ್ಕೆ ಜೀವಂತ ಸಾಕ್ಷಿಯಾಗಿದೆ.
- **ಜ್ಞಾನ ಮತ್ತು ಶಿಕ್ಷಣದ ಒತ್ತು** – ಬೌದ್ಧಧಮ್ಮವು ಅಜ್ಞಾನವನ್ನು ಎಲ್ಲಾ ದುಃಖಗಳ ಮೂಲ ಎಂದು ಪರಿಗಣಿಸಿತು. ಆದ್ದರಿಂದ ಜ್ಞಾನ ಸಂಪಾದನೆ, ಶಿಕ್ಷಣ ಮತ್ತು ಬೌದ್ಧಿಕ ಸ್ವಾತಂತ್ರ್ಯಕ್ಕೆ ಪ್ರೋತ್ಸಾಹ ನೀಡಿತು.
- **ಪ್ರಜಾಪ್ರಭುತ್ವದ ಮೌಲ್ಯಗಳು** – ಬೌದ್ಧ ಸಂಘಗಳು ಮತ್ತು ವಿಹಾರಗಳು ಸಮಾನ ಹಕ್ಕುಗಳ ಆಧಾರದ ಮೇಲೆ ನಿರ್ವಹಿಸಲ್ಪಟ್ಟಿದ್ದವು. ಇದರಿಂದ ಪ್ರಜಾಪ್ರಭುತ್ವ ನಡವಳಿಕೆ, ಸಮಾಲೋಚನೆ,

ತೀರ್ಮಾನಾತ್ಮಕ ಶೈಲಿ ಬೆಳೆದು, ಅನಂತರ ಹಿಂದೂ ಮತ ಹಾಗೂ ಇತರೆ ಧಾರ್ಮಿಕ ಸಂಸ್ಥೆಗಳಲ್ಲಿಯೂ ಅಳವಡಿಸಲ್ಪಟ್ಟವು.

ಹೀಗಾಗಿ, ಬೌದ್ಧಧಮ್ಮವು ಕೇವಲ ಧಾರ್ಮಿಕ ಚಳವಳಿಯಲ್ಲದೆ, ಭಾರತೀಯ ಸಮಾಜದ ಸಮಾನತೆ, ಪ್ರಜಾಪ್ರಭುತ್ವ, ಶಾಂತಿ ಮತ್ತು ಮಾನವೀಯತೆ ಮೌಲ್ಯಗಳನ್ನು ರೂಪಿಸಿದ ಮಹತ್ವದ ಶಕ್ತಿಯಾಗಿಯೂ ಪರಿಣಮಿಸಿತು.

**ಶಿಕ್ಷಣ ಕ್ಷೇತ್ರದಲ್ಲಿ ಬೌದ್ಧಧಮ್ಮದ ಪ್ರಭಾವ ಮತ್ತು ಪರಿಣಾ,**

ಬೌದ್ಧಧಮ್ಮವು ಭಾರತೀಯ ಶಿಕ್ಷಣ ಪರಂಪರೆಯಲ್ಲಿ ಕ್ರಾಂತಿಕಾರಕ ಬದಲಾವಣೆ ತಂದಿತು. ವೇದಾಧ್ಯಯನಕ್ಕೆ ಸೀಮಿತವಾಗಿದ್ದ ಜ್ಞಾನವನ್ನು ಜನಸಾಮಾನ್ಯರಿಗೂ ಮುಕ್ತಗೊಳಿಸುವ ಕಾರ್ಯ ಬೌದ್ಧ ಪರಂಪರೆಯ ಪ್ರಮುಖ ಸಾಧನೆಯಾಗಿದೆ. ಅದರಲ್ಲಿ ಪ್ರಮುಖವಾಗಿ;

- **ಪ್ರಾಯೋಗಿಕ ಮತ್ತು ಕ್ರಿಯಾಶೀಲ ಶಿಕ್ಷಣ –** ಬೌದ್ಧ ಶಿಕ್ಷಣವು ಕೇವಲ ಧಾರ್ಮಿಕ ಆಚರಣೆಗಳಿಗೆ ಮಾತ್ರ ಸೀಮಿತವಾಗಿರದೆ, ಪ್ರಾಯೋಗಿಕ, ಕ್ರಿಯಾಶೀಲ ಮತ್ತು ಸಮಾಜಮುಖಿವಾಗಿತ್ತು. ಅದು ಜೀವನೋಪಯೋಗಿ ಕೌಶಲ್ಯಗಳು, ನೈತಿಕ ಮೌಲ್ಯಗಳು ಮತ್ತು ಸಮಾನತೆಯನ್ನು ಒತ್ತಿ ಹೇಳಿತು.
- **ವಿಶ್ವಪ್ರಖ್ಯಾತ ವಿಶ್ವವಿದ್ಯಾನಿಲಯಗಳು –** ತಕ್ಷಶಿಲಾ, ವಿಕ್ರಮಪುರ, ನಳಂದಾ, ವಿಕ್ರಮಶಿಲಾ, ಒದಂತಪುರದಂತಹ ವಿಶ್ವವಿದ್ಯಾನಿಲಯಗಳು ಬೌದ್ಧ ಪರಂಪರೆಯ ಪ್ರಭಾವದಿಂದ ಬೆಳೆದವು. ಇವು ಕೇವಲ ಧರ್ಮಶಿಕ್ಷಣವಷ್ಟೇ ಅಲ್ಲದೆ, ವೇದಶಾಸ್ತ್ರ, ಖಗೋಳಶಾಸ್ತ್ರ, ವ್ಯಾಕರಣ, ತತ್ವಶಾಸ್ತ್ರ, ಗಣಿತದಂತಹ ವೈಜ್ಞಾನಿಕ ವಿಷಯಗಳನ್ನೂ ಬೋಧಿಸುತ್ತಿದ್ದವು.
- **ಪ್ರತಿಷ್ಠಿತ ವಿದ್ವಾಂಸರ ಉತ್ಪಾದನೆ –** ಬೌದ್ಧ ವಿದ್ಯಾಪೀಠಗಳು ದಿಗ್ನಾಗ, ಚರಕ, ನಾಗಾರ್ಜುನ, ವಸುಮಿತ್ರರಂತಹ ಮಹಾನ್ ತತ್ವಜ್ಞರು ಮತ್ತು ವಿಜ್ಞಾನಿಗಳನ್ನು ನೀಡಿವೆ. ಇವರ ಕೃತಿಗಳು ಭಾರತವಷ್ಟೇ ಅಲ್ಲದೆ ಚೀನಾ, ಟಿಬೆಟ್, ಶ್ರೀಲಂಕಾ, ಮಂಗೋಲಿಯಾದಂತಹ ದೇಶಗಳಲ್ಲಿಯೂ ಪ್ರಭಾವ ಬೀರಿದವು.
- **ರಾಷ್ಟ್ರೀಯ ಸಂಕೇತಗಳಲ್ಲಿ ಬೌದ್ಧ ಚಿಹ್ನೆಗಳು –** ಸ್ವತಂತ್ರ ಭಾರತದ ಧ್ವಜದಲ್ಲಿ ಅಶೋಕ ಚಕ್ರದ ಪ್ರತಿಷ್ಠಾಪನೆ ಹಾಗೂ ರಾಷ್ಟ್ರೀಯ ಲಾಂಛನದಲ್ಲಿ ಸಾರನಾಥದ ಅಶೋಕಸ್ತಂಭದ ಸಿಂಹಗಳು ಬೌದ್ಧ ಸಂಸ್ಕೃತಿಯ ಪ್ರಭಾವವನ್ನು ತೋರಿಸುತ್ತವೆ.
- **ಭಾಷಾ ಪ್ರಜ್ಞೆಯ ಉತ್ತೇಜನ –** ಬೌದ್ಧಧಮ್ಮವು ಸಂಸ್ಕೃತಕ್ಕಷ್ಟೇ ಸೀಮಿತವಾಗದೆ, ಪಾಲಿ ಮತ್ತು ಪ್ರಾಕೃತ ಭಾಷೆಗಳನ್ನು ಧಾರ್ಮಿಕ ಹಾಗೂ ಶಿಕ್ಷಣ ಮಾಧ್ಯಮಗಳನ್ನಾಗಿ ಮಾಡಿತು. ಇದರಿಂದ

ಜನಸಾಮಾನ್ಯರ ಭಾಷೆಗೆ ಗೌರವ ದೊರಕಿತು ಮತ್ತು ಭಾರತೀಯ ಭಾಷೆಗಳ ಬೆಳವಣಿಗೆಗೆ ಬೌದ್ಧಧಮ್ಮವು ಕಾರಣವಾಯಿತು.

- **ಮಾನವೀಯ ಮತ್ತು ಲೋಕೋಪಕಾರಿ ಪ್ರಭಾವ** – ಬೌದ್ಧಧಮ್ಮವು ಸಾರ್ವತ್ರಿಕ ಸಹೋದರತ್ವ, ಅಹಿಂಸೆ ಮತ್ತು ಸಮಾನತೆ ಎಂಬ ಮೌಲ್ಯಗಳನ್ನು ಬೋಧಿಸಿ ಸಮಾಜದ ನೈತಿಕತೆಯನ್ನು ಎತ್ತಿತು. ಅಶೋಕನು ಬೌದ್ಧಧಮ್ಮವನ್ನು ವಿಶ್ವಧರ್ಮವಾಗಿ ಪ್ರಸಾರ ಮಾಡಲು ಸಾರ್ವತ್ರಿಕ ಸಹೋದರತ್ವದ ನೀತಿಯನ್ನು ರಾಜ್ಯದ ಮೂಲತತ್ವವನ್ನಾಗಿಯೇ ಪರಿಗಣಿಸಿದನು.

ಹೀಗಾಗಿ, ಬೌದ್ಧಧಮ್ಮವು ಕೇವಲ ಧಾರ್ಮಿಕ ಚಳವಳಿ ಮಾತ್ರವಲ್ಲದೆ, ಭಾರತೀಯ ಶಿಕ್ಷಣ, ಸಂಸ್ಕೃತಿ, ರಾಷ್ಟ್ರ ಚಿಹ್ನೆಗಳು ಮತ್ತು ಸಾಮಾಜಿಕ ಮೌಲ್ಯಗಳನ್ನು ರೂಪಿಸಿದ ಶಕ್ತಿಶಾಲಿ ಚಿಂತನೆಯಾಗಿದೆ.

**ಬೌದ್ಧಧಮ್ಮದ ಮಾನವೀಯತೆ, ಸಾರ್ವತ್ರಿಕ ಸಹೋದರತ್ವ ಮತ್ತು ರಾಷ್ಟ್ರೀಯ ಏಕತೆ**

ಬೌದ್ಧಧಮ್ಮವು ಭಾರತೀಯ ಸಮಾಜಕ್ಕೆ ಮಾನವೀಯತೆ, ಸಮಾನತೆ ಮತ್ತು ಸಹೋದರತ್ವದ ಮೌಲ್ಯಗಳನ್ನು ಬೋಧಿಸುವ ಮೂಲಕ ಅದನ್ನು ಆಳವಾಗಿ ಪ್ರಭಾವಿಸಿತು. ಅವುಗಳೆಂದರೆ;

- **ಭಾಷಾ ಪ್ರಜ್ಞೆ ಮತ್ತು ಸ್ಥಳೀಯ ಭಾಷೆಗಳ ಗೌರವ** – ಬೌದ್ಧಧಮ್ಮವು ಸಂಸ್ಕೃತಕ್ಕಷ್ಟೇ ಸೀಮಿತವಾಗದೆ, ಪಾಲಿ ಮತ್ತು ಪ್ರಾಕೃತವನ್ನು ಸಹ ಜನಸಾಮಾನ್ಯರ ಭಾಷೆಗಳಲ್ಲಿ ಧರ್ಮೋಪದೇಶ ಮಾಡಿದುದರಿಂದ, ಭಾರತದ ಸ್ಥಳೀಯ ಭಾಷೆಗಳಿಗೆ ಗೌರವ ಸಿಕ್ಕಿತು. ಇದು ಭಾಷಾ ವೈವಿಧ್ಯತೆಗೆ ಒಗ್ಗಟ್ಟಿನ ಬಲವನ್ನು ನೀಡಿತು.
- **ಸಾರ್ವತ್ರಿಕ ಸಹೋದರತ್ವದ ಬೋಧನೆ** – ಬೌದ್ಧಧಮ್ಮದ ಮೂಲಸಂದೇಶವೇ ಸಾರ್ವತ್ರಿಕ ಸಹೋದರತ್ವ. ಅಶೋಕ ಮಹಾರಾಜನು ಈ ತತ್ವವನ್ನು ಅಂತರ ರಾಷ್ಟ್ರೀಯ ಮಟ್ಟದಲ್ಲಿ ಹರಡಲು ಶ್ರಮಿಸಿದನು. ತನ್ನ ಮಗ ಮಹೇಂದ್ರ ಮತ್ತು ಮಗಳು ಸಂಘಮಿತ್ರಳನ್ನು ಶ್ರೀಲಂಕಾಕ್ಕೆ (ಸಿಲೋನ್) ಧಮ್ಮದ ಪ್ರಚಾರಕ್ಕಾಗಿ ಕಳುಹಿಸಿದನು.
- **ವಿದೇಶಗಳಲ್ಲಿ ಬೌದ್ಧಧಮ್ಮದ ವ್ಯಾಪ್ತಿ** – ಕಾಲಾನುಕ್ರಮದಲ್ಲಿ ಬೌದ್ಧಧಮ್ಮವು ಬರ್ಮಾ (ಮಯನ್ಮಾರ್), ಜಪಾನ್, ಚೀನಾ, ಟಿಬೆಟ್, ಜಾವಾ, ಸುಮಾತ್ರಾ, ಬಾಲಿ, ಬೋರ್ನಿಯೊ, ಚಂಪಾದಂತಹ ದೇಶಗಳಿಗೆ ಹರಡಿತು. ಇದರಿಂದ ಬೌದ್ಧಧಮ್ಮವು ಕೇವಲ ಒಂದು ಧರ್ಮವಷ್ಟೇ ಅಲ್ಲ, ಭಾರತೀಯ ಸಂಸ್ಕೃತಿಯ ಜಾಗತಿಕ ರಾಯಭಾರಿಯಾಗಿ ಪರಿಣಮಿಸಿತು.
- **ರಾಷ್ಟ್ರೀಯ ಏಕತೆ ಮತ್ತು ಸಾಮ್ರಾಜ್ಯದ ನಿರ್ಮಾಣ** – ಭಾರತದಲ್ಲಿ ಅಶೋಕ, ಕನಿಷ್ಕ ಮತ್ತು ಹರ್ಷವರ್ಧನರಂತಹ ಮಾನವೀಯತೆಯ ತೀವ್ರ ಪ್ರತಿಪಾದಕರು ಬೌದ್ಧಧಮ್ಮದ ಸಹಾಯದಿಂದ ಭಾರತವನ್ನು ರಾಜಕೀಯ ಏಕತೆಯಡಿ ತರಲು ಪ್ರಯತ್ನಿಸಿದರು. ಈ ಪರಿಕಲ್ಪನೆಯನ್ನು ಮೊಘಲ್

ಸಾಮ್ರಾಜ್ಯ, ಬ್ರಿಟಿಷರ ಆಡಳಿತ ಹಾಗೂ ಅನಂತರದ ಸ್ವಾತಂತ್ರ್ಯ ಹೋರಾಟದ ರಾಷ್ಟ್ರೀಯವಾದಿಗಳು ಅನುಸರಿಸಿದರು.

ಹೀಗಾಗಿ, ಬೌದ್ಧಧಮ್ಮವು ಭಾಷಾ ವೈವಿಧ್ಯತೆ, ಸಾರ್ವತ್ರಿಕ ಸಹೋದರತ್ವ, ಅಂತರ ರಾಷ್ಟ್ರೀಯ ಬಾಂಧವ್ಯ, ರಾಷ್ಟ್ರೀಯ ಏಕತೆ ಮತ್ತು ಅಹಿಂಸೆಯ ರಾಜಕೀಯ ತತ್ವಗಳ ಮೂಲಕ ಭಾರತೀಯ ಸಮಾಜ ಮತ್ತು ರಾಜಕೀಯಕ್ಕೆ ಶಾಶ್ವತ ಕೊಡುಗೆ ನೀಡಿರುತ್ತದೆ.

**ಬೌದ್ಧಧಮ್ಮದ ಪ್ರಭಾವ ಮತ್ತು ಪರಿಣಾಮ**

ಬೌದ್ಧಧಮ್ಮವು ಕ್ರಿ.ಪೂ. 6ನೆಯ – 4ನೆಯ ಶತಮಾನಗಳ ನಡುವೆ ಪ್ರಾಚೀನ ಭಾರತದಲ್ಲಿ ಹುಟ್ಟಿಕೊಂಡಿತು. ತೀವ್ರ ಸಾಂಸ್ಕೃತಿಕ ಮತ್ತು ಧಾರ್ಮಿಕ ಆವಿಷ್ಕಾರದ ಅನಂತರ, ಇದು ಚೀನಾ, ಜಪಾನ್, ಮಂಗೋಲಿಯಾ, ಬರ್ಮಾ, ಟಿಬೆಟ್, ಶ್ರೀಲಂಕಾ, ನೇಪಾಳದಂತಹ ದೇಶಗಳಿಗೆ ಹರಡಿತು. ಈ ವ್ಯಾಪ್ತಿ ವೈಶಿಷ್ಟ್ಯಪೂರ್ಣವಾಗಿ, ಬೌದ್ಧಧಮ್ಮವು ಈ ದೇಶಗಳ ಸಂಸ್ಕೃತಿ, ಧಾರ್ಮಿಕ ಚಿಂತನೆ ಮತ್ತು ನಾಗರಿಕತೆಯ ಮೇಲೆ ಗಣನೀಯ ಪರಿಣಾಮ ಬೀರಿತು. ಸರಳ, ಅರ್ಥಗರ್ಭಿತ ಧರ್ಮ ಮತ್ತು ನೈತಿಕತೆಯ ತತ್ವಗಳನ್ನು ಜನಪ್ರಿಯವಾಗಿ ಸಾರಿತು. ವಾಸ್ತುಶಿಲ್ಪ, ಶಿಲ್ಪಕಲೆ ಮತ್ತು ಚಿತ್ರಕಲೆಗೆ ಅಮೂಲ್ಯ ಕೊಡುಗೆ ನೀಡಿತು. ದೇಶೀಯ ಭಾಷೆಗಳಲ್ಲಿ ಶಿಕ್ಷಣವನ್ನು ಪ್ರಚಾರಮಾಡಿ ಜನಸಾಮಾನ್ಯರಿಗೆ ಬೌದ್ಧ ತತ್ವವನ್ನು ಸುಲಭವಾಗಿ ಅರಿತುಕೊಳ್ಳಲು ಸಹಾಯ ಮಾಡಿತು. ಭಾವನಾತ್ಮಕ ಅಂಶ, ಸುಲಭವಾದ ನೈತಿಕ ಸಂಹಿತೆ ಮತ್ತು ಸರಳ ಬೋಧನಾ ವಿಧಾನಗಳು ಜನರನ್ನು ಬೌದ್ಧಧಮ್ಮಕ್ಕೆ ಆಕರ್ಷಿಸಿದವು. ಬೌದ್ಧಧಮ್ಮವು ಕೇವಲ ಧಾರ್ಮಿಕ ಚಳವಳಿ ಮಾತ್ರವಲ್ಲ, ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ ಮತ್ತು ಮಾನವೀಯ ಕ್ಷೇತ್ರಗಳಲ್ಲಿ ಶಾಶ್ವತ ಮತ್ತು ಅಮೂಲ್ಯ ಪ್ರಭಾವ ಬೀರಿತು.

**ರಾಷ್ಟ್ರೀಯ ಭಾವನೆ ಮತ್ತು ಮಾನವೀಯ ಮೌಲ್ಯಗಳು**

ಬೌದ್ಧಧಮ್ಮವು ಭಾರತೀಯ ಸಮಾಜಕ್ಕೆ ನೀಡಿದ ಅತ್ಯಂತ ಮಹತ್ವದ ಕೊಡುಗೆಯೊಂದೆಂದರೆ; ಅದುವೇ ರಾಷ್ಟ್ರೀಯ ಭಾವನೆ ಮತ್ತು ಮಾನವೀಯ ಮೌಲ್ಯಗಳ ಬೆಳವಣಿಗೆಯಾಗಿದೆ. ಬೌದ್ಧಧರ್ಮವು ಅಹಿಂಸೆ ತತ್ವವನ್ನು ಕೇಂದ್ರದಲ್ಲಿ ಇಟ್ಟು, ಜನರ ವ್ಯಕ್ತಿತ್ವದ ಮೇಲೆ ಆಳವಾದ ಪ್ರಭಾವ ಬೀರಿತು. ಅಹಿಂಸೆಯ ಮೂಲಕ ಜನರು ತಮ್ಮ ಕ್ರಿಯೆಗಳಲ್ಲಿ ಪರಿಗಣನೆ, ದಯೆ ಮತ್ತು ನೈತಿಕತೆಯನ್ನು ಪಾಲಿಸಲು ಪ್ರೇರಿತರಾದರು. ದಾನವೂ ಪರೋಪಕಾರಿ ಮನೋಭಾವ ಮತ್ತು ಸಮಾಜದಲ್ಲಿ ಸಹಾಯವಾಣಿಯಾಗಿದೆ. ಶುದ್ಧತೆಯೂ ದೈಹಿಕ, ಮಾನಸಿಕ ಮತ್ತು ನೈತಿಕ ಶುದ್ಧತೆಯನ್ನು ಉತ್ತೇಜಿಸುವುದು. ಕರುಣೆಯು ಎಲ್ಲಾ ಜೀವಿಗಳ ಮೇಲೆ ಮಮತೆ ಮತ್ತು ಕಾಳಜಿಯಾಗಿದೆ. ಸ್ವಯಂ–ತ್ಯಾಗವೂ ವೈಯಕ್ತಿಕ ಆಸೆ ಮತ್ತು ಲಾಭದ ಮೇಲೆ ನಿಯಂತ್ರಣವಾಗಿದೆ. ಸತ್ಯವೂ ನೈತಿಕ ನಿಷ್ಠೆ ಮತ್ತು ಭಾವನಾತ್ಮಕ ಪ್ರಾಮಾಣಿಕತೆಯಾಗಿದೆ.

ಭಾವೋದ್ರೇಕಗಳ ನಿಯಂತ್ರಣವೂ ಕ್ರೋಧ, ಅಹಂಕಾರ, ಲಾಲಸೆಯಂತಹ ಭಾವಗಳನ್ನು ತಗ್ಗಿಸುವ ಶಕ್ತಿಯಾಗಿದೆ.

ಒಟ್ಟಾರೆಯಾಗಿ; ಬೌದ್ಧಧಮ್ಮವು ನೈತಿಕತೆಯನ್ನು ವ್ಯಕ್ತಿ ಆಲೋಚನೆ, ನಿರ್ಧಾರ ಮತ್ತು ಕ್ರಿಯೆಗಳಲ್ಲಿ ಅನುಸರಿಸುವಂತೆ ಪ್ರೋತ್ಸಾಹಿಸಿತು. ಇದರಿಂದ ಸಮಾಜದಲ್ಲಿ ಶಾಂತಿ ಮತ್ತು ಸೌಹಾರ್ದತೆ ಬೆಳೆದವು. ಹೀಗಾಗಿ, ಬೌದ್ಧಧಮ್ಮವು ಜಾಗತಿಕ ಮಟ್ಟದಲ್ಲಿ ಮಾನವೀಯತೆ, ನೈತಿಕತೆ ಮತ್ತು ರಾಷ್ಟ್ರೀಯ ಭಾವನೆಗಳನ್ನು ಬೆಳೆಸುವ ಮೂಲಕ ಭಾರತೀಯ ಸಮಾಜದಲ್ಲಿ ಶಾಶ್ವತವಾಗಿ ತಳಹದಿಯನ್ನು ನಿರ್ಮಿಸಿರುವುದು ಕಂಡುಬರುತ್ತದೆ.

**ಗ್ರಂಥಸೂಚಿ**


- Allen, George Francis. *The Buddha's Philosophy*. New York: Macmillan, 1959
- Armstrong, Karen. *The Buddha.* New York: Penguin Putnam, 2001
- Bahm, A.J. *Philosophy of the Buddha*. New York: Harper & Row, 1958
- Blackstone, Kathryn R. *Women in the Footsteps of the Buddha: Struggles for Liberation in the Therigatha*. London: Curzon, 1998
- Carrithers, Michael. *The Buddha.* Oxford, UK: Oxford University Press, 1983
- Carrithers, Michael. *The Buddha: A Very Short Introduction*. New York: Oxford University Press, 2001
- Conze, Edward. *Buddhism: Its Essence and Development.* New York: Harper Torchbooks, 1965
- Hasnain, Nadeem. *Indian Anthropology*. New Delhi: PalakaPrakashan, 2016
- Meckel, Daniel J. and Robert L. Moore, eds. *Self and Liberation: The Jung-Buddhism Dialogue*. New York: Paulist Press, 1992
- Mitchell, Stephen. *Dropping Ashes on the Buddha*. New York: Grove Press, 1976
- Pio, Edwina. *Buddhist Psychology: A Modern Perspective.* New Delhi: Abhinav Publ., 1988
- Prebish, Charles S. *Historical Dictionary of Buddhism*. Metuchen, NJ: Scarecrow Press, 1993
- Rao, Shanker C N. *Sociology*. Delhi: S. Chand & Company Pvt. Ltd, 2014
- Wayman, Alex. *A Millenium of Buddhist Logic*.Delhi: MotilalBanarsidass, 1999